# ಧರ್ಮಕ್ಕೆ ಕೈ ಬಾರದೀ ಕಾಲ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 293.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 159.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 18.
4. **Note:** Lyrics given without highlights are as per Ref. 1. The wordings in Ref. 2 are fully matching with Ref. 1. The wordings in Ref. 3 are slightly different and are given in green highlights.
5. **Note:** Singer has followed lyrics as in Ref. 1.

ರಾಗ: ಪೂರ್ವಿ ತಾಳ: ಅಟ

ಧರ್ಮಕ್ಕೆ ಕೈ ಬಾರದೀ ಕಾಲ, ಪಾಪ -
ಕರ್ಮಕ್ಕೆ ಮನ ಸೋಲೋದೀ ಕಲಿಕಾಲ ॥ ಪ ॥

ದಂಡ ದ್ರೋಹಕೆ ಉಂಟು
ಪುಂಡು ಪೋಕರಿಗುಂಟು
ಹೆಂಡತಿ ಮಕ್ಕಳಿಗಿಲ್ಲೀ ಕಾಲ
ದಿಂಡೇರಿಗುಂಟು ಜಗ ಭಂಡರಿಗುಂಟು
ಅಂಡಲೆವರಿಗಿಲ್ಲವೀ ಕಾಲ ॥ 1 ॥

ಮತ್ತೆ ಸುಳ್ಳರಿಗುಂಟು
ನಿತ್ಯ ಹಾದರಕುಂಟು
ಉತ್ತಮರಿಗಿಲ್ಲವೀ ಕಾಲ
ತೊತ್ತೇರಿಗುಂಟು ತಾಟಕಿಗುಂಟು
ಹೆತ್ತ ತಾಯಿಗಿಲ್ಲವೀ ಕಾಲ ॥ 2 ॥

ಹುಸಿ ದಿಟವಾಯಿತು

ರಸ ಕಸವಾಯಿತು
ಸೊಸೆ ಅತ್ತೆ ದಂಡಿಸೋದೀ ಕಾಲ
ಬಿಸಜಾಕ್ಷ ಪುರಂದರ ವಿಠಲನ ಮನದಲ್ಲಿ
ಸ್ತುತಿಸುವವರಿಗಿಲ್ಲವೀ ಕಾಲ ॥ 3 ॥

**Note:** Below mentioned lyrics given in green highlights are as per Ref. 3 above.

ರಾಗ: ಶಂಕರಾಭರಣ ತಾಳ: ಅಟ

ಧರ್ಮಕ್ಕೆ ಕೈ ಬಾರದೀ ಕಾಲ, ಪಾಪ -
ಕರ್ಮಕ್ಕೆ ಮನ ಬಾಹುದೀ ಕಲಿಕಾಲ ॥ ಪ ॥

ದಂಡ-ದೋಷಕೆ ಉಂಟು, ಪುಂಡು-ಪೋಕರಿಗುಂಟು
ಹೆಂಡಿರು ಮಕ್ಕಳಿಗಿಲ್ಲವೀ ಕಾಲ
ಭಂಡೆಯರಿಗುಂಟು ದಿಂಡೆಯರಿಗುಂಟು, ಬೇಡಿ
ಕೊಂಡವರಿಗಿಲ್ಲವು ಈ ಕಲಿಕಾಲ ॥ ೧ ॥

ಒತ್ತೆ ಸೂಳೆಗುಂಟು, ಮತ್ತೆ ಹಾದರಕುಂಟು
ಹೆತ್ತ ತಾಯಿಗಿಲ್ಲ ಈ ಕಲಿಕಾಲ
ತೊತ್ತೆಯರಿಗೆ ಉಂಟು ಅರ್ತಿಕಾರ್ತಿಗಿಲ್ಲ
ಉತ್ತಮರಿಗೆ ಇಲ್ಲವೀ ಕಲಿಕಾಲ ॥ ೨ ॥

ಹುಸಿ ದಿಟವಾಯಿತು, ರಸ ಕಸವಾಯಿತು
ಮಸಿ ಮಾಣಿಕವಾಯಿತೀ ಕಾಲ
ವಸುಧೆಯೊಳಗೆ ನಮ್ಮ ಪುರಂದರ ವಿಠಲನ
ಬೆಸಸಿ ಪೂಜಿಪರ್ಗಿಲ್ಲ ಈ ಕಲಿಕಾಲ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮನ ಸೋಲದು** – ಮನಸ್ಸು ಒಲಿಯದು.

**ದಿಂಡೇರು** – ನಯ–ನಾಜೂಕಿಲ್ಲದ ಒರಟು ಹೆಂಗಸರು.

**ಅಂಡಲೆವರು** – ಬೀದಿ ಬೀದಿ ತಿರುಗುವ ಬಡವರು

**ತೊತ್ತೇರು** – ತೊತ್ತುಗಳು, ಸೇವಕಿಯರು, ಬೀದಿ ಬಸವೆಯರು

**ಬಿಸಜಾಕ್ಷ** – ತಾವರೆಯ ಕಣ್ಣುಳ್ಳವ.

**ಮಸಿ** = ಇದ್ದಲಿ

**ಬೆಸಸು** = ಬೇಡಿಕೊಳ್ಳು

**ಒತ್ತೆ** = ಸೂಳೆಗೆ ಕೊಡುವ ಹಣ

**ಅರ್ತಿಕಾರ್ತಿ** = ಪ್ರೀತಿಯ ಹೆಂಡತಿ, ಪ್ರೇಯಸಿ

**Classification:** Keerthane
**Ankita:** purandara vittala
**Location:** NA
**Category:** Artha Bhava
**Sub-Category:** dharma, kai, papa, karma, mosa, patni, makkalu, sullu, tayi, atte, bhumi, puje,
**Pravachana:** NA
**Explanation:** NA